SC No. 34/2018
PW-30

# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು.

## ಎಸ್. ಸಿ. 34/2018

| | | |
|---|---|---|
| ಸಾಕ್ಷಿದಾರರ ಹೆಸರು | ಚಂದ್ರಮ್ಮ | ಪ್ರಮಾಣ ವಚನ ಮಾಡಿದ ದಿನಾಂಕ: 09.02.2026 |
| ತಂದೆಯ/ಗಂಡನ ಹೆಸರು | ಲೇಟ್ ಮಾದಪ್ಪ | |
| ವಯಸ್ಸು | 60 ವರ್ಷ | |
| ವೃತ್ತಿ | ಗೃಹಿಣಿ | ಪ್ರಾ.ಸಾಃ 30 |
| ವಾಸ ಸ್ಥಳ | ಕ್ಯಾತಮಾರನಹಳ್ಳಿ | ಚಾ.ಸಾಃ 37 |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ಮೃತ ರಾಜು ನನ್ನ ಮಗ ಇದ್ದ. ಈಗ್ಗೆ 10 ವರ್ಷಗಳ ಹಿಂದೆ ಮರಣಹೊಂದಿರುತ್ತಾನೆ. ಕ್ಯಾತಮಾರನಹಳ್ಳಿಯಲ್ಲಿ ನನ್ನ ಮಗನನ್ನು ಕೊಲೆ ಮಾಡಿದ್ದರು ಏಕೆಂದರೆ ಆತನು ಜನಗಳ ಸಲುವಾಗಿ/ಸಮಾಜ ಸೇವೆ ಮಾಡುತ್ತಿದ್ದ. ಆದ್ದರಿಂದ ಆತನನ್ನು ಕೊಲೆ ಮಾಡಿರುತ್ತಾರೆ. ನಾನು ಪೊಲೀಸರ ಮುಂದೆ ನನ್ನ ಮಗನ ಫೋಟೋ ಹಾಜರುಪಡಿಸಿದ್ದೇನೋ ಇಲ್ಲವೋ ಎಂದು ನನಗೆ ಜ್ಞಾಪಕ ಇರುವುದಿಲ್ಲ. ನಾನು ಈಗ ನೋಡುತ್ತಿರುವ ಫೋಟೋಗಳಲ್ಲಿ ನನ್ನ ಮಗ ಇದ್ದಾನೆ. ಸಾಕ್ಷಿದಾರರು ನೋಡಿ ಗುರುತಿಸಿದ 2 ಫೋಟೋಗಳು ಈಗಾಗಲೇ ನಿಪಿ-36 ಎಂದು ಗುರುತಿಸಲ್ಪಟ್ಟಿರುತ್ತವೆ.

**ಈ ಹಂತದಲ್ಲಿ , ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.**

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ನನ್ನ ಮಗ ಆರ್.ಎಸ್.ಎಸ್. ನಲ್ಲಿ ಕಾರ್ಯಕರ್ತನಾಗಿ ಕೆಲಸ ಮಾಡುತ್ತಿದ್ದ ಎಂದರೆ ಸರಿ. ನಾನು ಪೊಲೀಸರಿಗೆ ಈಗ ತೋರಿಸಿದ ನಿಪಿ-36 ರಲ್ಲಿನ 2 ಫೋಟೋಗಳನ್ನು ಹಾಜರುಪಡಿಸಿದ್ದು ಪ್ರಕರಣ ಆಗಿ ಈಗ್ಗೆ 10 ವರ್ಷಗಳು ಆಗಿರುವುದರಿಂದ ಮರೆತಿರುತ್ತೇನೆ ಅಂತ ಹೇಳುತ್ತಿದ್ದೇನೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ :**

ನನ್ನ ಮಗ ರಾಜು ಸುತ್ತಮುತ್ತಲು ಎಲ್ಲಾ ಜನಾಂಗದವರೊಂದಿಗೆ ಚೆನ್ನಾಗಿ ಇದ್ದ ಎಂದರೆ ಸರಿ. ನನ್ನ ಮಗ ಈಗ ಇದ್ದಿದ್ದರೆ BJP ಪಕ್ಷದಿಂದ ಶಾಸಕನಾಗುವ ಅವಕಾಶ ಇತ್ತು ಎಂದರೆ ಸರಿ.

**ಮರವಿಚಾರಣೆಃ ಇಲ್ಲ**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

**4 ನೇ ಅಪರ ಜಿಲ್ಲಾ ಮತ್ತು ಸತ್ರ**
**ನ್ಯಾಯಾಧೀಶರು, ಮೈಸೂರು.**